ಈಗಾಗಲೇ ಸಾಕಷ್ಟು ಕೈಗಾರಿಕೆಗಳು ಬಂದಿವೆ. ಇದರಿಂದಾಗಿ ಆ ಸ್ಥಳಕ್ಕೆ ಹೆಚ್ಚು ಮಹತ್ವ ಬಂದಿದೆ. ಆದ್ದರಿಂದ ಇಲ್ಲಿ ಕ್ರೀಡಾಂಗಣ ಇರುವುದು ಅವಶ್ಯಕವೆಂದು ಕೇಳುತ್ತಿದ್ದೇನೆ. ದಯಮಾಡಿ ಈ ವರ್ಷ ಸೇರಿಸುತ್ತೇವೆಂದು ಹೇಳಿ.

ಶ್ರೀ ಕೆ.ಜಯಪ್ರಕಾಶ ಹೆಗಡೆ:- ಪರಿಶೀಲನೆ ಮಾಡಿ ಅಧಿಕಾರಿಗಳಿಗೆ ತಿಳಿಸಿ ಅದರ ವರದಿ ತರಿಸಿಕೊಂಡು ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸುತ್ತೇನೆ.

ಅಧ್ಯಕ್ಷರು:- ಏಕೆಂದರೆ ಅವರು ಕನ್ಸರ್ನ್ಡ್ ಮಂತ್ರಿಗಳು ಅಲ್ಲ.

ವಿಷಯ:- ಧಾರವಾಡ-ಹುಬ್ಬಳ್ಳಿ ನಡುವಣ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಜೋಡಿ ರಸ್ತೆ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 178 (1344)

ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ-ಹುಬ್ಬಳ್ಳಿ ನಡುವಣ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಈವರೆಗೆ ಎಷ್ಟು ಕಿ.ಮೀ. ಡಾಂಬರೀಕರಣ ಪೂರ್ಣಗೊಂಡಿದೆ. ಅದರ ಪ್ರತಿ ಕಿ.ಮೀ. ವೆಚ್ಚ ಎಷ್ಟು ಪೂರ್ಣ ಒಂದು ವರ್ಷದಲ್ಲಿ ಖರ್ಚು ಮಾಡಿದ ಹಣವೆಷ್ಟು? (ವಿವರ ನೀಡುವುದು)

ಆ) ಈ ರಾಷ್ಟ್ರೀಯ ಹೆದ್ದಾರಿಯನ್ನು ಜೋಡಿ ರಸ್ತೆ ಮಾಡುವ ಅಗತ್ಯತೆ ಇರುವುದು ನಿಜವೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಈವರೆಗೆ 17 ಕಿ.ಮೀ. ಉದ್ದ ರಸ್ತೆಯನ್ನು ಬಲಪಡಿಸಿ, ಡಾಂಬರೀಕರಣ ಮಾಡಲಾಗಿದೆ. ಸದರಿ ಕಾಮಗಾರಿಗೆ ಪ್ರತಿ ಕಿ.ಮೀ.ಗೆ ಸರಾಸರಿ 29.42 ಲಕ್ಷ ರೂ. ವೆಚ್ಚವಾಗಿರುತ್ತದೆ. 1995-96ನೇ ಸಾಲಿನಲ್ಲಿ ಈ ಕಾಮಗಾರಿಗೆ 288.56 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ.

ಆ) ನಗರ ಮಿತಿಯಲ್ಲಿ ಬರುವ ರಸ್ತೆ ಜೋಡಿ ರಸ್ತೆ ಮಾಡುವ ಅಗತ್ಯವಿರುತ್ತದೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಬೆಂಗಳೂರು ನಂತರದ ಎರಡನೇ ಮಹಾನಗರ ಧಾರವಾಡ-ಹುಬ್ಬಳ್ಳಿ ಈ ಮಹಾನಗರದ ಹೆದ್ದಾರಿಯ ರಸ್ತೆ ಈಗಾಗಲೇ 30 ಕಿಲೋ ಮೀಟರ್ ಇದ್ದು ಅದರಲ್ಲಿ 17 ಕಿಲೋ ಮೀಟರ್ ಮಾತ್ರ ಕೆಲಸ ಮಾಡಿದ್ದಾರೆ. ಉಳಿದ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಇದರ ಜೊತೆಗೆ ರಾಷ್ಟ್ರೀಯ ಹೆದ್ದಾರಿ ಜೋಡುರಸ್ತೆ ಮಾಡುವ ಅಗತ್ಯವಿರುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದಕ್ಕೆ ನಗರ ಮಿತಿಯಲ್ಲಿ ಬರುವ ರಸ್ತೆ ಜೋಡಿ ರಸ್ತೆ ಮಾಡುವ ಅಗತ್ಯವಿರುತ್ತದೆಂದು ಹೇಳಿದ್ದಾರೆ. ಸಂತೋಷ. ಯಾವಾಗಿನಿಂದ ಈ ಜೋಡಿ ರಸ್ತೆಯನ್ನು ಪ್ರಾರಂಭ ಮಾಡುತ್ತಾರೆಂದು

ಕೇಳುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ:- ಬೆಂಗಳೂರು ಮತ್ತು ಹುಬ್ಬಳ್ಳಿ ಧಾರವಾಡದ ಮಧ್ಯೆ ಇರುವ ಈ ರಸ್ತೆಯನ್ನು 4 ಪಥಗಳ ರಸ್ತೆಯನ್ನಾಗಿ ಮಾಡಬೇಕೆಂದು ಬೇಡಿಕೆಯನ್ನು ಕೇಳುತ್ತಿದ್ದಾರೆ. ಆದರೆ ಅದು 30 ಕೋಟಿ ರೂಪಾಯಿಗಳ ಯೋಜನೆ ರಾಜ್ಯದ ಹಣದಿಂದಲೇ ಆ ಕೆಲಸ ಮಾಡಬೇಕಾಗಿದೆ. ಮತ್ತು ಆ ರಸ್ತೆಗಳನ್ನು ಮಾಡುವುದು ಈ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ಸಮಂಜಸವೆನ್ನುವುದನ್ನು ನಾವು ಗಮನದಲ್ಲಿಡಬೇಕು. ಇವತ್ತು ಹುಬ್ಬಳ್ಳಿ ಧಾರವಾಡದ ಮಧ್ಯೆ ಬೈಪಾಸ್ ರಸ್ತೆಯನ್ನು ಸಂಪೂರ್ಣವಾಗಿ ಮಾಡಬೇಕೆಂಬ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಲಾಗಿದೆ. ಬಿ.ಓ.ಟಿ. ಸ್ಕೀಮ್ ಎಂದು ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಆಗಸ್ಟ್ 7ನೇ ತಾರೀಖು ಇದಕ್ಕೆ ಟೆಂಡರ್ ಆಗುವಂತಹ ವ್ಯವಸ್ಥೆ ಇರುತ್ತದೆ. ಹೊರಗಡೆ ಈ ರಸ್ತೆ ಹೋಗುತ್ತಿರುವುದರಿಂದ ಹುಬ್ಬಳ್ಳಿ ಧಾರವಾಡದ ಮಧ್ಯೆ ಇರತಕ್ಕಂತಹ ರಸ್ತೆಯಲ್ಲಿ ಸಾರಿಗೆ ಸಂಚಾರದ ಒತ್ತಡ ಕಡಿಮೆಯಾಗುತ್ತದೆ. ಇದನ್ನು ಮಾಡಬೇಕೆಂಬ ಬೇಡಿಕೆಯನ್ನು ಅವರು ನಮ್ಮ ಮುಂದಿಟ್ಟಿದ್ದಾರೆ. ಜಮೀನನ್ನು ಸ್ವಾಧೀನಪಡಿಸಿಕೊಂಡು ಮಾಡಲಿಕ್ಕೆ ಹೊರಟರೆ 30 ಕೋಟಿ ಹಣ ಬೇಕಾಗುತ್ತದೆ. ಹೊಸ ರಸ್ತೆ ಕಾರ್ಯಕ್ರಮ ಮುಗಿದ ಮೇಲೆ ಇದನ್ನು ಪರಿಶೀಲನೆ ಮಾಡುವುದು ಸೂಕ್ತವೆಂದು ಭಾವಿಸಿದ್ದೇನೆ. 12 ಕಿಲೋ ಮೀಟರ್ ರಸ್ತೆ ಕೆಲಸ ಹುಬ್ಬಳ್ಳಿ ಧಾರವಾಡ ಮಧ್ಯೆ ಇರುವುದನ್ನು ತೀವ್ರಗತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

+ಶ್ರೀ ಚಂದ್ರಕಾಂತ ಬೆಲ್ಲದ್:- ಈಗಿನ ವಾಹನದ ದಟ್ಟಣೆ ಬಹಳವಾಗಿದೆ. ಮೈಸೂರು-ಬೆಂಗಳೂರು ರಸ್ತೆಯ ದಟ್ಟಣೆಗಿಂತಲೂ ಬಹುದೊಡ್ಡ ದಟ್ಟಣೆ ಅಂಕಿ ಸಂಖ್ಯೆ ಪ್ರಕಾರ ಇದೆ. ಬೈಪಾಸ್ ರಸ್ತೆ ಏನು ಇದೆ ಇದು ಹತ್ತು ವರ್ಷದಿಂದ ಶುರುವಾಗಿಲ್ಲ. ಇದನ್ನು ತೀವ್ರವಾಗಿ ಪ್ರಾರಂಭ ಮಾಡಿ ಎಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗಿರುವಂತಹ ವಾಹನಗಳ ದಟ್ಟಣೆ ನೋಡಿದರೆ ಈಗ ಡಬ್ಬಲ್ ರಸ್ತೆಯಾಗುವುದು ಅಗತ್ಯ ಇದೆ. ಇದು ಎರಡನೇ ದೊಡ್ಡ ಮಹಾನಗರ. ಅಲ್ಲಿ ಇತಿಹಾಸದಲ್ಲೇ ದೊಡ್ಡದಾದಂತಹ ಎ.ಪಿ.ಎಂ.ಸಿ. ಮಾರ್ಕೆಟಿಂಗ್ ಸಮಿತಿ ಅಂದರೆ ಮಾರ್ಕೆಟ್ ಯಾರ್ಡ್ ಬಂದಿದೆ. ಆ ರಸ್ತೆ ಪಕ್ಕದಲ್ಲಿ ಮಣ್ಣು ಹಾಕಿದ್ದಾರೆ. ಸಾಧಾರಣ ಆರು ಇಂಚಿನಿಂದ ಒಂದು ಫೂಟ್‌ವರೆಗಿರುವ ತಗ್ಗಿನಲ್ಲಿ ಕೇವಲ ಮಣ್ಣುಹಾಕಿದ್ದಾರೆ. ಅಲ್ಲಿ ಕಡಿ ಹಾಕಬೇಕಾಗಿತ್ತು. ಅದನ್ನು ಹಾಕಿಲ್ಲ. ರೋಡಿನಲ್ಲೇ ಅಲ್ಲಲ್ಲಿ ವಾಹನಗಳು, ಎಸ್‌ಟಿ ಬಸ್‌ಗಳು ನಿಲ್ಲುತ್ತವೆ. ಅವು ಸಹಿತ ರಸ್ತೆ ಮಧ್ಯದಲ್ಲಿಯೇ ನಿಲ್ಲುತ್ತವೆ. ಅದರಿಂದ ವಾಹನಗಳು ಸೈಡ್‌ನಲ್ಲೂ ಹೋಗುವುದಕ್ಕೂ ಸ್ಥಳ ಇಲ್ಲ. ಇವತ್ತು ಅಲ್ಲಿ ಪೇ ವೇಗಳನ್ನೂ ಸಹಿತ ಮಾಡಿ ಎಂದು ನಾನು ಬಹಳ ದಿವಸದಿಂದ ಕೇಳುತ್ತಿದ್ದೇನೆ. ಸೈಡ್‌ನಲ್ಲಿ ಎಲ್ಲೆಲ್ಲಿ ಬಸ್ ನಿಲ್ದಾಣ ಇದ್ದಾವೆ, ಅಲ್ಲಿ, ಪೇ ವೇ ಮಾಡಿ ಸೈಡ್‌ನಲ್ಲಿ ಬಸ್ ನಿಲ್ಲುವುದಕ್ಕೆ ಎಂದು ಅದನ್ನು ಕೇಳುತ್ತಿದ್ದೇನೆ. ಮತ್ತು ಅಲ್ಲಿ ಮಣ್ಣು ಏನು ಹಾಕಿದ್ದಾರೆ. ಅಲ್ಲೆಲ್ಲಾ ಕಡಿ ಹಾಕಿ ಗಟ್ಟಿಮಾಡಿ ಅದಕ್ಕೆ

ಮೋರಮ್ ಹಾಕಿದರೆ ಚೆನ್ನಾಗಿರುತ್ತದೆ ಎಂದು ಹೇಳಿ ನಾನು ತಮ್ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಮತ್ತು ಇದನ್ನು ಡಬ್ಬಲ್ ರೋಡು ಮಾಡುವುದಕ್ಕೆ ತೀವ್ರವಾಗಿ ಲ್ಯಾಂಡ ಅಕ್ವಿಸಿಷನ್ ತೆಗೆದುಕೊಳ್ಳಬೇಕು. ಏಕೆಂದರೆ ಈಗಲೇ ಜಾಗ ಬೇಕಾದಷ್ಟು ಸಿಗುತ್ತದೆ. ಅದಲು ಬದಲು ಬೇಕಾದಷ್ಟು ಜಮೀನು ಇದೆ. ತೀವ್ರವಾಗಿ ಅಕ್ವಿಸಿಷನ್ ಕೆಲಸವನ್ನು ಶುರುಮಾಡಬೇಕು ಎಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಇದು ಕರ್ನಾಟಕ ರಾಜ್ಯದಲ್ಲಿ ಎರಡನೆಯ ಮಹಾನಗರ ಆಗಿರುವುದರಿಂದ ತೀವ್ರವಾಗಿ ಕೆಲಸವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಬೆಲ್ಲದ್‌ರವರು ಹೇಳಿದಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಆ ರಸ್ತೆ ಸುಧಾರಣೆ ಮಾಡುವಂಥ ಕೆಲಸವನ್ನು ಮಾಡಿಸುತ್ತೇನೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮುಖ್ಯವಾಗಿ ನಾವು ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂದು ಉತ್ತರ ರೂಪವಾಗಿ ಮೊದಲೇ ಹೇಳಿದ್ದೇನೆ. ಅದಕ್ಕೂ ಮತ್ತೆ ಅವರು ಕೇಳುತ್ತಿದ್ದಾರೆ. ಹೊಸ ರಸ್ತೆಗಳ ನಿರ್ಮಾಣವಾಗುತ್ತಿರುವುದರಿಂದ ಸಮಸ್ಯೆಯಾಗುವುದಿಲ್ಲ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು:- ಮಾನ್ಯ ಸಭಾನಾಯಕರು ಏನೋ ಹೇಳುವವರಿದ್ದಾರೆ.

ಶ್ರೀ ಜೆ.ಹೆಚ್.ಪಟೀಲ್ (ಮಾನ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಅಸೆಂಬ್ಲಿ ಚುನಾವಣೆಗಿಂತ ಮುಂಚೆ ತಾವೇನಾದರೂ ಆ ಕಡೆ ಹೋಗಿದ್ದೀರೋ? ಕುದುರೆಗಾಡಿ ಕೂಡ ಹೋಗುವ ಹಾಗೆ ಇರಲಿಲ್ಲ. ಕಾರಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಹೋಗಿದ್ದರು. ಈಗ ಸಧ್ಯ ಮೋಟಾರಬಲ್ ಸ್ಟೇಜ್‌ಗೆ ತಂದಿದ್ದೇವೆ. ಡಬ್ಬಲ್ ರೋಡ್ ಬಗ್ಗೆ ನೋಡೋಣ. ಚಂದ್ರಕಾಂತ್ ಬೆಲ್ಲದ್‌ರವರಿಗೆ ಅವಸರ ಬೇಡ.

ಶ್ರೀ ಚಂದ್ರಕಾಂತ್ ಬೆಲ್ಲದ್:- ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರ ಕಾಲದಲ್ಲಿ ಎರಡನೇ ಮಹಾನಗರ ಎನ್ನುವಂಥ ಧಾರವಾಡ-ಹುಬ್ಬಳ್ಳಿಗೆ ಬೇಗ ಜೋಡು ರಸ್ತೆಗಳನ್ನು ಮಾಡಿಕೊಡಲಿ ಎಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:- ನೀವೆಲ್ಲಾ ಹೊಂದಾಣಿಕೆಯಲ್ಲಿದ್ದೀರಿ ಎಂದು ನಮಗೆ ಈಗ ಗೊತ್ತಾಯಿತು.

+ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳಿದರು, ಕುದುರೆಗಾಡಿ ಕೂಡ ಅಡ್ಡಾಡುತ್ತಿರಲಿಲ್ಲ ಎಂದು. ಅಂದರೆ ಉತ್ತರ

ಕರ್ನಾಟಕ ಅಷ್ಟು ನಿರ್ಲಕ್ಷ್ಯ ಆಗುತ್ತಾ ಬಂದಿತ್ತು. ಅಲ್ಲಿ ಮೊನ್ನೆ ಮೊನ್ನೆ ರಸ್ತೆಯಾಗಿದೆ. ಆದರೆ ಅಲ್ಲಿ ಜನದಟ್ಟಣೆ ಜಾಸ್ತಿಯಾಗಿದೆ, ಟ್ರಾಫಿಕ್ ಜಾಸ್ತಿಯಾಗಿದೆ. ಬೈಪಾಸ್ ರೋಡ್ ಆಗುತ್ತದೆ ಎಂದು 15-20 ವರ್ಷಗಳಿಂದಲೂ ಹುಬ್ಬಳ್ಳಿಯಮಂದಿಗೆ ಹೇಳುತ್ತಾ ಬಂದರು. ಇಲ್ಲಿಯವರೆಗೂ ಬೈಪಾಸ್ ಮುಗಿದಿಲ್ಲ. ಆಮೇಲೆ ಸಚಿವರು ನಮ್ಮ ಭಾಗದವರು ಇದ್ದಾರೆ. ಅವರಿಗೆಲ್ಲ ಗೊತ್ತಿದೆ. ಹುಬ್ಬಳ್ಳಿ ಧಾರವಾಡದಲ್ಲಿ ಎಷ್ಟು ದಟ್ಟಣೆ ಇದೆ ಎಂದು. ಆ ಹುಬ್ಬಳ್ಳಿ ಧಾರವಾಡದ ನಡುವೆ ಸಾಕಷ್ಟು ಆಕ್ಸಿಡೆಂಟ್ಸ್ ಆಗುತ್ತಿವೆ. ಹಲವಾರು ಜನರು ದಿನನಿತ್ಯ ಸಾಯುತ್ತಿದ್ದಾರೆ. ಮತ್ತು ಈ ನಗರಮಿತಿಯೊಳಗೆ ಎಂದು ಅವರು ಹೇಳಿದ್ದಾರೆ. ನಗರಮಿತಿಯೊಳಗಲ್ಲ. ಹುಬ್ಬಳ್ಳಿ-ಧಾರವಾಡ ಮಧ್ಯದಲ್ಲಿಯೇ ಡಬ್ಬಲ್ ರೋಡು ಆಗಬೇಕು. ಆ ರೀತಿಯಾದರೆ ಮಾತ್ರ ಕಂಟ್ರೋಲ್‌ಗೆ ಬರುತ್ತದೆ. ಬೈಪಾಸ್ ರೋಡು ಆದರೂ ಸಹಿತ ಅಲ್ಲಿ ಜನದಟ್ಟಣೆ ಇದೆ. ಅದರ ಸಲುವಾಗಿ ಬೈಪಾಸ್ ಆದರೂ ಸಹಿತ ಜೋಡಿ ರಸ್ತೆಗಳನ್ನು ಮಾಡಲಿಕ್ಕೆ ಮಾನ್ಯ ಸಚಿವರು ಗಮನವನ್ನು ಹರಿಸಬೇಕಾಗುತ್ತದೆ. ಮತ್ತು ಉಳಿದ ರಸ್ತೆ ಇನ್ನು 8-10 ಕಿಲೋ ಮೀಟರ್ ಉಳಿದಿದೆ ಹುಬ್ಬಳ್ಳಿ-ಧಾರವಾಡ ಮಧ್ಯದಲ್ಲಿ. ಆ ರಸ್ತೆಗಳನ್ನು ತಕ್ಷಣವೇ ಮಾಡಲಿಕ್ಕೆ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ:- ಉಳಿದ ರಸ್ತೆಗಳನ್ನು ತೆಗೆದುಕೊಳ್ಳುವುದರ ಸಲುವಾಗಿ ಸನ್ಮಾನ್ಯ ಜವದೀಶ್ ಶೆಟ್ಟರ್ ಹೇಳಿದ ರೀತಿ ಕಾರ್ಯಕ್ರಮಕ್ಕೆಗೊಳ್ಳುತ್ತೇನೆ ಎಂದು ಹೇಳುತ್ತೇನೆ. ಬೈಪಾಸ್ ರಸ್ತೆಗೆ ಅವರಿಗೆ ಇರುವ ಅನುಮಾನ ಏನು ಇದೆ, 10-15 ವರ್ಷ ಈಗಾಗಲೇ ಆಗಿ ಹೋಗಿದೆ. ಇನ್ನು ಹತ್ತು-ಹದಿನೈದು ವರ್ಷ ಆಗುತ್ತದೆ ಎನ್ನುವ ಅನುಮಾನ ಏನು ಇದೆ, ಆ ಅನುಮಾನಕ್ಕೆ ಕಾರಣ ಇಲ್ಲ. ಆಗಸ್ಟ್ 7ನೇ ತಾರೀಖಿಗೆ ಇದರ ಬಗ್ಗೆ ಏನಾದರೂ ಒಂದು ತೀರ್ಮಾನಕ್ಕೆ ಬರುತ್ತೇವೆ. ಇದು ನಮ್ಮ ಪ್ರೈವೇಟ್ ಕಂಟ್ರಾಕ್ಟರ್ ಪ್ರಶ್ನೆಯಲ್ಲ. ಅವರು 30 ವರ್ಷಗಳವರೆಗೆ ಅದನ್ನು ರಸ್ತೆಗಳನ್ನು ಮೇನ್‌ಟೈನ್ ಮಾಡಿಕೊಡುವ ವ್ಯವಸ್ಥೆಯೂ ಬರಬಹುದೋ ಏನೋ. ಈ ರೀತಿ ಇರುವಾಗ ಅವರು ಕಟ್ಟಬೇಕಾದವರು ಬಹಳಷ್ಟು ವಿಳಂಬ ಮಾಡಲಿಕ್ಕೆ ಹೋಗುವುದಿಲ್ಲ. ಪ್ರೈವೇಟ್ ಪಾರ್ಟಿಯವರು ಕಟ್ಟಿದ ರಸ್ತೆಗಳನ್ನು ನಿರ್ಮಾಣ ಮಾಡಿಕೊಡಬೇಕಾದಾಗ ವಿಳಂಬ ಮಾಡದೆಯೇ ಒಂದೆರಡು ವರ್ಷಗಳಲ್ಲಿ ಮುಗಿಸಿಕೊಡಲಿಕ್ಕೆ ಸಾಧ್ಯತೆ ಇರುವುದರಿಂದ ಅದಕ್ಕಾಗಿ ಅವರು ಅನುಮಾನಪಡಬೇಕಾಗಿಲ್ಲ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಪ್ರೈವೇಟ್ ಕಾಂಟ್ರಾಕ್ಟರ್ ಎಂದು ಆರು ತಿಂಗಳಿಂದ ಹೇಳುತ್ತಾ ಬಂದಿದ್ದಾರೆ. ಇನ್ನು ಕೆಲಸ ಕಾರ್ಯಗತವಾಗಿಯೇ ಇಲ್ಲ.

ಶ್ರೀ ಮಂಜುನಾಥ ಸಿ.ಕುನ್ನೂರ್:- ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯನ್ನು ಈಗಾಗಲೇ ಮಾನ್ಯ ಸಚಿವರು ಎರಡು ವರ್ಷದಲ್ಲಿ ಮುಗಿಸಿಕೊಡುತ್ತೇವೆ ಎಂದು ಹೇಳಿದರು. ಕೊನೆಯಪಕ್ಷ ಅವರು ಹೇಳಿದಂತೆ ಎರಡು ವರ್ಷದೊಳಗಾಗಿ ಅವರು ತತ್‌ಕ್ಷಣ ಮಾಡಿಕೊಟ್ಟರೆ ನಮಗೆ ಬಹಳ

ಸಂತೋಷವಾಗುತ್ತದೆ. ಅಲ್ಲಿ ಇರುವ ಪರಿಸ್ಥಿತಿಯನ್ನು ನೋಡಿದರೆ ಗೊತ್ತಾಗುತ್ತದೆ. ನಿಜಕ್ಕೂ ಹುಬ್ಬಳ್ಳಿಗೆ ನಾವು ಎಂಟರ್ ಆದ ತಕ್ಷಣ ಎಷ್ಟೊಂದು ಅನಾನುಕೂಲವಾಗುತ್ತದೆ ಎಂಬುದನ್ನು ಗಮನಿಸಬೇಕು. ಅಲ್ಲಿ ಕಳೆದ ಒಂದು ವಾರದ ಹಿಂದೆ ಡೈನೇಜ್ ಮಾಡುತ್ತಿದ್ದರು. ತಿಂಗಳುಗಟ್ಟಲೆ ಎದುರುಬದುರು ಬರುವ ವಾಹನಗಳು ಹೋಗಲಿಕ್ಕೆ ರಸ್ತೆಯೇ ಇರಲಿಲ್ಲ. ಈ ರೀತಿಯಾಗಿ ನಗರದ ಮಿತಿಯಲ್ಲಿ ಹೋಗುವುದರಿಂದ ಸಾಕಷ್ಟು ವಾಹನಗಳು ಅಲ್ಲಿ ಅಡ್ಡಾಡುವುದರಿಂದ ಧೂಳೂ ಕೂಡ ಜಾಸ್ತಿಯಾಗುತ್ತಿದೆ. ಅದರ ಜೊತೆಗೆ ಜನರಿಗೆ ಬಹಳಷ್ಟು ಟ್ರಾಫಿಕ್ ತೊಂದರೆಯಾಗುತ್ತಿದೆ. ಇದರಿಂದ ಏನಾಗಿದೆ ಎಂದರೆ ದಾವಣಗೆರೆ ಆಗಲಿ, ತುಮಕೂರು ಆಗಲಿ....

ಅಧ್ಯಕ್ಷರು:- ರಿಪೀಟಿಷನ್ ಆಯಿತು. ಅವರು ಆಗಸ್ಟ್ 7ರಿಂದ ನಾನು ಕೆಲಸ ಪ್ರಾರಂಭ ಮಾಡಿಸಲಿಕ್ಕೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ ಎಂದರೆ ನೀವು ಮತ್ತೆ ರಿಪೀಟ್ ಮಾಡಿಕೊಂಡು ಹೋದರೆ ಏನು ಪ್ರಯೋಜನ? ಹೊಸದು ಏನಾದರೂ ಇದ್ದರೆ ಕೇಳಿ.

ಶ್ರೀ ಮಂಜುನಾಥ್ ಸಿ.ಕುನ್ನೂರ್:- ಅಲ್ಲಿರುವ ಬ್ರಿಡ್ಜ್ ಅನ್ನೂ ಕೂಡ ತಾವು ತತ್‌ಕ್ಷಣ ಮುಗಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:- ಬ್ರಿಡ್ಜೇ ಇಲ್ಲದೆ ರಸ್ತೆ ಮಾಡುತ್ತಾರೇನು, ಮಂಜುನಾಥ್? ಕಾಟ್ವೆಯವರೇ, ನೀವು ಪ್ರಶ್ನೆ ಕೇಳಿ. ರಿಪಿಟೀಷನ್ ಬೇಡಿ.

ಶ್ರೀ ಅಶೋಕ್ ಕಾಟ್ವೆ:- ಮಾನ್ಯ ಅಧ್ಯಕ್ಷರೇ, 30 ಕಿಲೋಮೀಟರ್‌ನಲ್ಲಿ 17 ಕಿಲೋಮೀಟರ್ ಆಗಿದೆ. ಇನ್ನು 13 ಕಿಲೋಮೀಟರ್ ಬಾಕಿ ಉಳಿದಿದೆ. ಈ 17 ಕಿಲೋಮೀಟರ್ ಸಹಿತ ಈಗ ಕೆಟ್ಟುಹೋಗುತ್ತಿದೆ. ಹೀಗಾಗಿ 30 ಕಿಲೋಮೀಟರನ್ನು ಮಾಡುವ ಆಸ್ಪದ ಬಂದೀತು. ಅದೂ ಅಲ್ಲದೇ ಹತ್ತು ವರ್ಷದಿಂದ ಕೆಲಸ ಬಾಕಿ ಉಳಿದಿದೆ. ಚಿತ್ರದುರ್ಗದ್ದು ಬೈಪಾಸ್ ಆಯಿತು. ಹರಿಹರ ಬೈಪಾಸ್ ಆಯಿತು. ಬಾಕಿ ಕಡೆಯೂ ಬೈಪಾಸ್ ಆಗುತ್ತಾ ಇದೆ. ಹುಬ್ಬಳ್ಳಿ-ಧಾರವಾಡದ್ದು ಏತಕ್ಕೆ ಆಗುತ್ತಿಲ್ಲ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು?

ಅಧ್ಯಕ್ಷರು:- ಅದೇನೂ ಹೇಳುವುದು ಬೇಡ. ಈಗ ಅದನ್ನು ಮಾಡಿಸಿ.

+ ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೇ, ಅವರ ಕಳಕಳಿ ಏನು ಇದೆ, ಅದನ್ನು ಅರ್ಥ ಮಾಡಿಕೊಂಡಿದ್ದೇನೆ. ನಾನೂ ಅದೇ ಜಿಲ್ಲೆಯಿಂದ ಬಂದವನು. ನಿನ್ನೆ ನಾನು ಅಲ್ಲಿಂದ ಬಂದಿದ್ದೇನೆ, ಇದು ಗೊತ್ತಿಲ್ಲದಂಥ ವಿಷಯವೇನಲ್ಲ. ನಾನು ಸನ್ಮಿತ್ರರಿಗೆ ಏನು ಹೇಳುವುದು ಅಂದರೆ ಈ ರಸ್ತೆಗಳನ್ನು ಬೇರೆಯವರಿಗೆ ಬಿ.ಓ.ಟಿ. ಸ್ಕೀಮ್‌ನಲ್ಲಿ ವಹಿಸಿಕೊಡುವುದರಿಂದ ಅವರು ವಿಳಂಬ ಮಾಡಿದರೆ ಯಾರು ಬಿ.ಓ.ಟಿ. ಸ್ಕೀಮ್‌ನಲ್ಲಿ ಪಡೆದಿರುತ್ತಾರೆ, ಅವರಿಗೇ ಹಾನಿಯಾಗುತ್ತದೆ. ಆದ್ದರಿಂದ ಅವರು ವಿಳಂಬ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಹಾಕಿರುವ ಬಂಡವಾಳವನ್ನು ವಾಪಸ್ಸು

ಪಡೆಯಬೇಕಾದಂಥ ಪ್ರಶ್ನೆ ಇರುವುದರಿಂದ ಸುಂಕವನ್ನು ಅಲ್ಲಿ ಕಲೆಕ್ಟ್ ಮಾಡಬೇಕಾಗಿರುತ್ತದೆ. ಆಗಸ್ಟ್ 7ನೇ ತಾರೀಖಿಗೆ ಇದರ ಬಗ್ಗೆ ಕೇಂದ್ರಸರ್ಕಾರದಲ್ಲಿ ಟೆಂಡರ್‌ಗೆ ದಿನಾಂಕವನ್ನು ಗೊತ್ತುಪಡಿಸಲಾಗಿದೆ. 10-15 ವರ್ಷದಿಂದ ವಿಳಂಬವಾಗಿರುವುದು ಸರ್ಕಾರದ ಕಾರ್ಯಕ್ರಮಗಳು ಅನುದಾನದ ಲಭ್ಯತೆಯ ಮೇಲೆ ಆಗಿರಬಹುದು. ತಮ್ಮ ರಸ್ತೆಗಳಿಗೆ ಹಣ ಬರಬೇಕಾದರೆ ಕೇಂದ್ರಸರ್ಕಾರದಿಂದ ಬರಬೇಕು. ಕೇಂದ್ರಸರ್ಕಾರದಲ್ಲಿ ಇದು ಟೆಂಡರ್ ಆಗಿ ಕೆಲಸ ಆಗುವುದು ಇದೆ. ಅದಕ್ಕಾಗಿ ದಯವಿಟ್ಟು ಯಾರೂ ಅನುಮಾನಪಡಬೇಕಾಗಿಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ವಿಷಯ:- ಕರಾವಳಿ ಪ್ರದೇಶದಲ್ಲಿ ಆಳ ಸಮುದ್ರ ಮೀನುಗಾರಿಕೆಗೆ ಪ್ರೋತ್ಸಾಹ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 179 (25)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಆಳ ಸಮುದ್ರ ಮೀನುಗಾರಿಕೆಯನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಆ) ಕರಾವಳಿ ಮೀನುಗಾರಿಕೆಗೆ ಬಳಸುವ ಟ್ರಾಲ್‌ಬೋಟ್, ಇತ್ಯಾದಿಗಳಿಗೆ ಬಳಸುವ ಡಿಸೆಲ್ ಎಣ್ಣೆಯ ಮೇಲಿನ ಅಬಕಾರಿ ಸುಂಕ ವಿನಾಯ್ತಿ ಈ ವರ್ಷ ಮೀನುಗಾರರಿಗೆ ನೀಡದೆ ತೊಂದರೆಯಾಗಿರುವ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಮೀನುಗಾರಿಕೆಯನ್ನು ಪ್ರೋತ್ಸಾಹಿಸುವ ವಿಷಯದಲ್ಲಿ ಮೀನುಗಾರರಿಗೆ ಸರ್ಕಾರದವರು ಈಗ ನೀಡುತ್ತಿರುವ ಸೌಲಭ್ಯಗಳೇನು?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):-

ಅ) 1. ದೂರ ತೀರದಲ್ಲಿ ಮೀನುಗಾರಿಕೆ ಮಾಡುವ ದೋಣಿಗಳಿಗೆ ರೇಡಿಯೋ, ಟೆಲಿಫೋನ್, ಜಿ.ಪಿ.ಎಸ್.ನ್ಯಾವಿಗೇಟರ್, ಫಿಶ್‌ಫೈಂಡರ್‌ಗಳನ್ನು ಅಳವಡಿಸಲು ಸಹಾಯಧನ.

2. ದೂರ ಸಂವೇದಿ ಉಪಗ್ರಹದ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಮೀನು ಸಿಗುವ ಸ್ಥಳವನ್ನು ಗುರುತಿಸಿ ಮಾಹಿತಿಯನ್ನು ಮೀನುಗಾರರಿಗೆ ಒದಗಿಸಲಾಗುತ್ತಿದೆ.

3. ಬಹುದಿನದ ದೂರ ಸಮುದ್ರ: ಆಳ ಸಮುದ್ರ ಮೀನುಗಾರಿಕೆಗೆ ದೋಣಿಗಳ ಖರೀದಿಗೆ ಗರಿಷ್ಠ 1.00 ಲಕ್ಷ ರೂ.ಗಳ ಸಹಾಯಧನವನ್ನು ಪ್ರತಿ ದೋಣಿಗೆ ನೀಡಲಾಗುವ ಯೋಜನೆಯನ್ನು 1996-97ನೇ ಸಾಲಿನಲ್ಲಿ ಹೊಸದಾಗಿ ಹಮ್ಮಿಕೊಳ್ಳಲು